

# ಸಾವಯುವ ಕೃಷಿಗೆ ಸಾವಯುವ ದ್ರಾವಣ



ಸಂದೀಪ್ ಮಂಜುನಾಥ್
ಎಂ.ಎಸ್ಸಿ.ಕೃಷಿ, ಹುಣಸೂರು

ಮುಂದುವರೆದ ಭಾಗ...

ಮರಗಿಡಗಳ ಔಷಧ ಮತ್ತು ಆಹಾರ ಎಂಬ ಪುಸ್ತಕದಲ್ಲಿ 80ಕ್ಕೂ ಹೆಚ್ಚು ಬಗೆಯ ದ್ರಾವಣಗಳ ಉಲ್ಲೇಖವಿದೆ. ಈ ದ್ರಾವಣಗಳನ್ನು ತಯಾರಿಸಲು ತಾಳ್ಮೆ ಮತ್ತು ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಅನೇಕ ಬಗೆಯ ಸಸ್ಯಗಳನ್ನು ಹುಡುಕಿಕೊಂಡು ಹೋಗಿ ಅವುಗಳ ಎಲೆಗಳನ್ನು ತಂದು ಗೋಮೂತ್ರದೊಂದಿಗೆ ಬೇಯಿಸಿ ಕಷಾಯವನ್ನು ತಯಾರಿಸಬೇಕಾಗುತ್ತದೆ. ಪ್ರಸ್ತುತ ರೈತರು ಗೊಬ್ಬರದ ಅಂಗಡಿಗೆ ಹೋಗಿ ಸೀಸೆಯಲ್ಲಿ ಸಿಗುವ ರಾಸಾಯನಿಕವನ್ನು ತಂದು ನೀರಿನಲ್ಲಿ ಬೆರೆಸಿ ಬಹಳ ಸುಲಭವಾಗಿ ಸಿಂಪಡಿಸುತ್ತಿದ್ದಾರೆ.

ಇಂತಹ ರೈತರಿಗೆ ನೀವು ಬೇವಿನಸೊಪ್ಪು, ಲಕ್ಕಿ ಸೊಪ್ಪು, ಮೆಣಸಿನಕಾಯಿ, ಬೆಳ್ಳುಳ್ಳಿ, ತಂಬಾಕು, ಸಗಣಿ, ಗೋಮೂತ್ರ ಇವುಗಳನ್ನೆಲ್ಲಾ ಕಲಸಿ ಎಂಟರಿಂದ ಹತ್ತು ಗಂಟೆ ಕುದಿಸಿ ತಣ್ಣಗಾಗಿಸಿ ನಂತರ ಸೋಸಿ ಉಪಯೋಗಿಸಿ ಎಂದರೆ ನೂರಕ್ಕೆ ತೊಂಬತ್ತರಷ್ಟು ರೈತರು ನಿಮಗೆ ತಲೆ ಕೆಟ್ಟಿದೆ ಎಂದು ಆಡಿಕೊಳ್ಳುತ್ತಾರೆ.

ತರಕಾರಿ ಮತ್ತು ಇತರೆ ಅಲ್ಪಾವಧಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆಯುವಲ್ಲಿ ಅನೇಕ ರೈತರು ಸೋಲುವುದು ಇದೇ ಕಾರಣಕ್ಕೆ.

ಬಹುವಾರ್ಷಿಕ ತೋಟಗಾರಿಕಾ ಬೆಳೆಗಳಲ್ಲಿ ಹೆಚ್ಚು ಕೀಟ ಮತ್ತು ರೋಗ ಬಾಧೆ ಇಲ್ಲದಿರುವ ಕಾರಣ ಸಾವಯವ ಕೃಷಿ ಪದ್ಧತಿ ಇಲ್ಲಿ ಗೆಲ್ಲುತ್ತಿದೆ. ಆದರೆ ತರಕಾರಿ ಮತ್ತು ಇತರೆ ಅಲ್ಪಾವಧಿ ಬೆಳೆಗಳಿಗೆ ರೋಗ ಮತ್ತು ಕೀಟ ಬಾಧೆ ಹೆಚ್ಚು.

ಮಲ್ಲಿನಾಥ ರವರ ಪುಸ್ತಕದಲ್ಲಿ ಎಂಬತ್ತಕ್ಕೂ ಹೆಚ್ಚು ದ್ರಾವಣಗಳ ಉಲ್ಲೇಖವಿದೆ. ಆದರೆ ಎಲ್ಲಾ ರೈತರಿಗೆ ಎಲ್ಲಾ ಸಂದರ್ಭದಲ್ಲಿ ಅವುಗಳ ಉಪಯುಕ್ತತೆ ಇರುವುದಿಲ್ಲ. ಉದಾಹರಣೆಗೆ ಒಬ್ಬ ತೊಗರಿ ಬೆಳೆಯುವ ರೈತ ಗೋಕೃಪಾಮೃತವನ್ನು ಉಪಯೋಗಿಸುತ್ತಿದ್ದಾನೆ ಎಂದಿಟ್ಟುಕೊಳ್ಳೋಣ. ಆತ ತೊಗರಿ ಕಟಾವಾದ ನಂತರ ಸುಮಾರು ಆರು ತಿಂಗಳು ಗೋಕೃಪಾಮೃತವನ್ನು ಬಳಸದಿದ್ದರೂ ಮುಂದಿನ ಬೆಳೆ ಬರುವತನಕ ಉಳಿಸಿಕೊಳ್ಳಲು ನಾನಾ ಕಷ್ಟಗಳನ್ನು ಪಡಬೇಕಾಗುತ್ತದೆ. ಪ್ರತಿನಿತ್ಯ ಎರಡು ಬಾರಿ ಕಡ್ಡಿಯಿಂದ ತಿರುಗಿಸಬೇಕು. 40 ದಿನಗಳಾದ ನಂತರ ಬೆಲ್ಲ ಮತ್ತು ಮಜ್ಜಿಗೆಯನ್ನು ಹಾಕಬೇಕು. ಸರಿಯಾಗಿ ಮುಚ್ಚಿ ಶೇಖರಿಸಿಟ್ಟು ಕೊಳ್ಳಬೇಕು. ನಾಲ್ಕು ದಿನ ಬೇರೆ ಕೆಲಸದ ನಿಮಿತ್ತ ಇತ್ತ ಗಮನ ಹರಿಸದಿದ್ದರೆ ಅಷ್ಟು ದ್ರಾವಣ ಹಾಳಾಗಿ ಹೋಗುತ್ತದೆ. ಬಹುತೇಕ ಎಲ್ಲಾ ದ್ರಾವಣಗಳ ಪರಿಸ್ಥಿತಿ ಹೀಗೆ ಇರುತ್ತದೆ. ಈ ಕಾರಣಕ್ಕಾಗಿ ರೈತರು ಸಾವಯವ ಕೃಷಿಯತ್ತ ಪ್ರಾರಂಭದಲ್ಲಿ ಉತ್ಸಾಹ ತೋರಿಸಿದರೂ ಕಾಲಕ್ರಮೇಣ ರಾಸಾಯನಿಕಕ್ಕೆ ಮೊರೆಹೋಗುತ್ತಿದ್ದಾರೆ.

ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಮಲ್ಲಿನಾಥರು ಹೆಚ್ಚು ಉಪಯೋಗವಾಗುವಂತಹ ಸುಮಾರು 20 ದ್ರಾವಣಗಳ ತಯಾರಿಯನ್ನು ರೈತರಿಗೆ ಪ್ರಾತ್ಯಕ್ಷಿಕೆ ಮುಖಾಂತರ ತೋರಿಸಿ ತಮ್ಮ ಹೊಲ-ಗದ್ದೆಗಳಲ್ಲಿ ಉಪಯೋಗಿಸಬೇಕೆಂಬ ಮಹತ್ತರ ಉದ್ದೇಶದಿಂದ ಪ್ರಾರಂಭಿಸಿರುವ ಘಟಕವೇ ಆರ್ಗ್ಯಾನಿಕ್ ಇನ್ಪುಟ್ ಪ್ರೊಡಕ್ಷನ್ಸ್ ಸೆಂಟರ್.

ಜೀವಾಮೃತ, ಗೋಕೃಪಾಮೃತ, ಅಗ್ನಿ ಅಸ್ತ್ರ, ದಶಪರ್ಣಿ ಕಷಾಯ, ಹುಳಿ ಮಜ್ಜಿಗೆಯ ವಿವಿಧ ದ್ರಾವಣಗಳು, ಅಮೃತಪಾನಿ, ಮೀನಿನ ಎಣ್ಣೆಯ ಟಾನಿಕ್, ಬಯೋ ಎಂಜೈಮ್ ಗಳು ಸೇರಿದಂತೆ 20ಕ್ಕೂ ಹೆಚ್ಚು ರೀತಿಯ ದ್ರಾವಣಗಳನ್ನು ಈ ಘಟಕದಲ್ಲಿ ತಯಾರಿಸಲಾಗುತ್ತಿದೆ. ಇದರಿಂದ ಹಳ್ಳಿಯಲ್ಲಿ ಉದ್ಯೋಗವು ಸೃಷ್ಟಿಯಾಗುತ್ತಿದೆ. ಪ್ರಸ್ತುತ ಗೋಪಾಲ್ಸ್ ತಂಡ ಇದರ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತಿದೆ.

ಅನೇಕ ರೈತರಿಗೆ ರೋಗ ಮತ್ತು ಕೀಟಗಳನ್ನು ಸಾವಯವ ರೀತಿಯಲ್ಲಿ ನಿರ್ವಹಿಸಬೇಕೆಂಬ ಆಸೆ ಇರುತ್ತದೆ. ಆದರೆ ಕೀಟ ಅಥವಾ ರೋಗ ಬಾಧೆ ಎದುರಾದಾಗ ಯಾವ ದ್ರಾವಣವನ್ನು ತಯಾರಿಸಬೇಕು ಅದನ್ನು ಹೇಗೆ ಉಪಯೋಗಿಸಬೇಕೆಂಬ ಪ್ರಾಯೋಗಿಕ ಮಾಹಿತಿ ಇಲ್ಲದೆ ಗೊಬ್ಬರದ ಅಂಗಡಿಯಲ್ಲಿ ದೊರೆಯುವ ರಾಸಾಯನಿಕ ದ್ರಾವಣಗಳನ್ನು ತಂದು ಸಿಂಪಡಿಸುತ್ತಾರೆ.

ಕೆಲ ಸಾವಯವ ಕೀಟನಾಶಕಗಳನ್ನು ತಯಾರಿಸಲು 15ರಿಂದ 20 ದಿನ ಕಾಲಾವಕಾಶ ಬೇಕಾಗುತ್ತದೆ. ಬಹಳಷ್ಟು ಸಂದರ್ಭದಲ್ಲಿ ರೈತರಿಗೆ ಇಷ್ಟು ಸಮಯ ಕಾಯಲು ಆಗುವುದಿಲ್ಲ. ಅನೇಕ ರೈತರು ಮುಂಜಾಗ್ರತಾ ಕ್ರಮವಾಗಿ ಈ ಕೀಟನಾಶಕಗಳನ್ನು ತಯಾರಿಸಿಟ್ಟು ಕೊಂಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಲ್ಲಿನಾಥರು ಸ್ಥಾಪಿಸಿರುವ ಈ ಘಟಕ ರೈತರಿಗೆ ಸಹಾಯಕ್ಕೆ ಬರುತ್ತದೆ.ಘಟಕದಿಂದ ರೈತರಿಗೆ ಎಲ್ಲಾ ಬಗೆಯ ಮದರ್ ಕಲ್ಚರ್‌ಗಳನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಒಂದು ವೇಳೆ ರೈತರು ತಮ್ಮ ಜಮೀನಿಗೆ ಉಪಯೋಗಿಸಲು ಹೆಚ್ಚಿನ ಪ್ರಮಾಣದಲ್ಲಿ ದ್ರಾವಣಗಳನ್ನು ಕೊಂಡುಕೊಳ್ಳ ಬಯಸಿದರೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ನಿಮಗೆಲ್ಲ ತಿಳಿದಿರುವ ಹಾಗೆ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ರಾಸಾಯನಿಕ ಕೀಟನಾಶಕಗಳನ್ನು ರೈತರಿಗೆ ಮಾರಲು ಆಕರ್ಷಕವಾದ ಸೀಸೆಗಳಲ್ಲಿ ತುಂಬಿಸಿ ಗೊಬ್ಬರದ ಅಂಗಡಿಗಳಲ್ಲಿ ಅಂದವಾಗಿ ಜೋಡಿಸುತ್ತಾರೆ. ಹಳ್ಳಿಗಳಲ್ಲಿ ರೈತರ ಸಭೆಗಳನ್ನು ಏರ್ಪಡಿಸಿ ಕರಪತ್ರ ಹಂಚಿ ವಿಡಿಯೋಗಳನ್ನು ತೋರಿಸುವ ಮುಖಾಂತರ ರೈತರು ತಮ್ಮ ಕಂಪನಿಯ ಉತ್ಪನ್ನಗಳನ್ನು ಕಂಡುಕೊಳ್ಳಬೇಕೆಂದು ಪ್ರೇರೇಪಿಸುತ್ತಾರೆ.




ಇದೇ ರೀತಿ ಸಾಕಷ್ಟು ಕಂಪನಿಗಳು ತಮ್ಮದು ಸಾವಯವ ಉತ್ಪನ್ನ ಎಂದು ಹೇಳಿಕೊಂಡು ಅವುಗಳಿಗೆ ವಿವಿಧ ಹೆಸರುಗಳನ್ನು ನೀಡಿ ಮಾರಾಟ ಮಾಡುತ್ತಿದ್ದಾರೆ. ಅದರಲ್ಲೂ ಕೆಲ ಪ್ರತಿಷ್ಠಿತ ಕಂಪನಿಗಳು ಏಜೆಂಟುಗಳನ್ನು ನೇಮಿಸಿಕೊಂಡು ಇಂತಿಷ್ಟು ವ್ಯಾಪಾರ ಮಾಡಿಸಿದರೆ ವಿದೇಶ ಪ್ರಯಾಣ ಇಂತಿಷ್ಟು ಬೋನಸ್ ಎಂದೆಲ್ಲ ಆಮಿಷ ಒಡ್ಡುತ್ತಿದೆ.

ಇವರುಗಳನ್ನೆಲ್ಲಾ ಎದುರಿಸಿ ರೈತರು ತಮ್ಮ ಮನೆಯಲ್ಲೇ ತಮಗೆ ಏನು ಬೇಕೋ ಅವುಗಳನ್ನು ತಯಾರಿಸಿಕೊಳ್ಳಲು ಎಲ್ಲ ರೀತಿಯ ತರಬೇತಿಯನ್ನು ಉಚಿತವಾಗಿ ಗೋಪಾಲ್ಸ್ ತಂಡದ ಈ ಘಟಕ ನೀಡುತ್ತದೆ.

ಮಲ್ಲಿನಾಥರು ಪ್ರಾರಂಭಿಸಿದ ಈ ಸಾವಯವ ದ್ರಾವಣಗಳ ಉತ್ಪಾದನಾ ಘಟಕದ ಕಾರ್ಯವೈಖರಿಯನ್ನು ನೋಡಿ ಮತ್ತಿಬ್ಬರು ರೈತರು ತಮ್ಮ ಹಳ್ಳಿಗಳಲ್ಲಿ ಇಂಥದ್ದೆ ಘಟಕವನ್ನು ತೆರೆದಿದ್ದಾರೆ.ಸರ್ಕಾರ ಹೇಗೆ ಎರೆಹುಳು ತೊಟ್ಟಿಯ ನಿರ್ಮಾಣ ಮಾಡಲು ಪ್ರೋತ್ಸಾಹಿಸುತ್ತದೋ ಅದೇರೀತಿ ಇಂತಹ ಘಟಕಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸಿದರೆ ಪ್ರತಿಯೊಂದು ಹಳ್ಳಿಯಲ್ಲೂ ಒಬ್ಬರಿಗೆ ಉದ್ಯೋಗ ದೊರೆಯುತ್ತದೆ ಮತ್ತು ಸಾವಯವ ಕೃಷಿಯ ಅನುಷ್ಠಾನ ಅತ್ಯಂತ ವೇಗವಾಗಿ ಆಗುತ್ತದೆ. ಇಂತಹ ಘಟಕಗಳನ್ನು ನಿರ್ವಹಿಸಲು ಆಸಕ್ತರಿಗೆ ಗೋಪಾಲ್ ತಂಡದ ಮಲ್ಲಿನಾಥ ಹೇಮಾಡಿಯವರು ಸೂಕ್ತ ತರಬೇತಿಯನ್ನು ನೀಡುತ್ತಾರೆ.




ಆರ್ಗ್ಯಾನಿಕ್ ಇನ್ಪುಟ್ ಪ್ರೊಡಕ್ಷನ್ ಸೆಂಟರ್ ಯಶಸ್ಸಿನ ಬೆನ್ನಲ್ಲೇ ಮಲ್ಲಿನಾಥ ರು ತಮ್ಮ ಗ್ರಾಮದಲ್ಲಿ ಸಿರಿಧಾನ್ಯಗಳ ಸಂಸ್ಕರಣ ಘಟಕ ತೆರೆದಿದ್ದಾರೆ. ಎಲ್ಲರಿಗೂ ತಿಳಿದಿರುವ ಹಾಗೆ ಸಿರಿಧಾನ್ಯಗಳನ್ನು ಬೆಳೆಯುವುದು ಸುಲಭ. ಆದರೆ ಕಟಾವಾದ ನಂತರ ಸಂಸ್ಕರಣೆ ಮಾಡುವುದು ಬಹಳ ಕಷ್ಟ. ಪ್ರಸ್ತುತ ಈ ಘಟಕದಿಂದ ಹಲವು ರೈತರು ತಾವು ಬೆಳೆದ ಸಿರಿಧಾನ್ಯಗಳನ್ನು ಯಂತ್ರದ ಸಹಾಯದಿಂದ ಸಂಸ್ಕರಿಸಿ ಮೊದಲು ತಾವು ಉಪಯೋಗಿಸಿ ಮಿಕ್ಕಿದ್ದನ್ನು ಮಾರಾಟ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಒತ್ತಡದ ಕೆಲಸದ ನಡುವೆ ಮಲ್ಲಿನಾಥ್ ತಮ್ಮ ಸ್ನೇಹಿತರೊಂದಿಗೆ ಐದು ಎಕರೆ ಭೂಮಿ ಖರೀದಿಸಿ ಗುಲ್ಬರ್ಗಾ ದಂತ ಪ್ರದೇಶದಲ್ಲಿ ಜೀವ ವೈವಿಧ್ಯಮಯ ತಾಣ ನಿರ್ಮಾಣ ಮಾಡಬೇಕೆಂದು ಪಣತೊಟ್ಟಿದ್ದಾರೆ. ಈಗಾಗಲೇ ಹತ್ತಾರು ಬಗೆಯ ಹಣ್ಣಿನ ಮತ್ತು ಪರಿಸರಸ್ನೇಹಿ ಗಿಡಗಳನ್ನು ಇಲ್ಲಿ ಬೆಳೆಸುತ್ತಿದ್ದಾರೆ. ಇನ್ನು ಕೆಲ ವರ್ಷಗಳ ನಂತರ ಅದು ಸಂಪೂರ್ಣ ಸ್ವಾವಲಂಬಿಯಾಗುವುದು.

ಮಹಾತ್ಮ ಗಾಂಧಿ ಹೇಳುವಂತೆ ನೀನು ಏನನ್ನು ಆಚರಿಸುತ್ತಿಯೋ ಅದನ್ನೇ ಬೋಧಿಸು ಎನ್ನುವಂತೆ ಮಲ್ಲಿನಾಥರು ತಮ್ಮ ಇಬ್ಬರು ಮಕ್ಕಳನ್ನು ಸರ್ಕಾರಿ ಅನುದಾನಿತ ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿಸುತ್ತಿದ್ದಾರೆ. ಮದುವೆಯಾದಂದಿನಿಂದಲೇ ಪತ್ನಿಗೆ ಸಾವಯವ ಜೀವನ ಪದ್ಧತಿಯ ಮಹತ್ವ ತಿಳಿಸುತ್ತಾ ಅವರನ್ನು ತಮ್ಮ ಕಾಯಕದಲ್ಲಿ ಜೋಡಿಸಿಕೊಂಡಿದ್ದಾರೆ. ದೇಸಿ ಆಕಳ ಸಗಣಿ ಗಂಜಲದಿಂದ ಪಂಚಗವ್ಯ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆ ಕಲ್ಪಿಸಿದ್ದಾರೆ. ಇದರಿಂದ ಹಲವು ಗ್ರಾಮೀಣ ಹೆಣ್ಣು ಮಕ್ಕಳಿಗೆ ಉದ್ಯೋಗ ದೊರೆತಂತಾಗಿದೆ. ಇನ್ನು ರೈತರು ದೂರವಾಣಿ ಮುಖಾಂತರ ಸಲಹೆ ಕೇಳಿದರೂ ಉತ್ತರಿಸುತ್ತಾರೆ. ಸಾಧ್ಯವಾದರೆ ಜಮೀನಿಗೆ ತೆರಳಿ ಅಗತ್ಯ ಮಾಹಿತಿ ಒದಗಿಸುತ್ತಾರೆ. ಶಾಲಾ ಕಾಲೇಜುಗಳಿಗೆ, ಸಭೆ ಸಮಾರಂಭಗಳಿಗೆ ಸಾವಯವ ಕೃಷಿ ಮತ್ತು ಸರಳ ಜೀವನ ಪದ್ಧತಿಯ ಕುರಿತು ಉಪನ್ಯಾಸ ನೀಡಲು ಸದಾ ಸಿದ್ಧರಾಗಿರುತ್ತಾರೆ ಮಲ್ಲಿನಾಥ ಹೇಮಾಡಿಯವರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9535935622.